

ಕಾಯುವ ದಿಕ್ಕಿನ ಕಣ್ಣು ತಪ್ಪಿಸಿ ವಿರುದ್ಧ ದಿಕ್ಕಿನಿಂದ ಬಂದು ನಾವು ಗಾಬರಿ ಬಿದ್ದ ಪ್ರಸಂಗಗಳು ಅನೇಕ ನಡೆದಿವೆ.

ಈ ಸಲವೂ ಹೀಗೆ ಆಯಿತು. ಹುಲಿಗಳು ವಿರುದ್ಧ ದಿಕ್ಕಿನಿಂದ ಬಂದವು. ನಮ್ಮ ಕಣ್ಣುಗಳು ಮುಂದಿನ ಪೊದೆಯ ಮೇಲೆ ನೆಟ್ಟಿದ್ದವು. ಅಷ್ಟರಲ್ಲಿ ನಮ್ಮ ಎದುರಿಗಿದ್ದ ಜೀಪಿನವರು ನಮ್ಮ ಕಡೆ ತಿರುಗಿ ಕ್ಯಾಮೆರಾಗಳ ಕೀಲಿಸಿದರು. ನಾವು ದಿಗಿಲಾಗಿ ಹಿಂತಿರುಗಿ ನಿಂತೆವು. ಒಂದು ಹುಲಿ ನಮ್ಮ ಜೀಪಿನ ಹಿಂಬದಿಯಿಂದ ಹಾಯ್ದು ಬಂದು ಪಕ್ಕದ ಪೊದೆ ದಾಟಿ ಮುಂದೆ ಹೋಯಿತು. ಇದನ್ನು ಗಮನಿಸಿದ ಮತ್ತೊಂದು ಹುಲಿ ಛಂಗನೆ ಜಿಗಿದು ಬಂದು ಅದರ ಜತೆ ಸೇರಿಕೊಂಡಿತು. ಈಗಂತೂ ನಮ್ಮ ಕ್ಯಾಮೆರಾಗಳಿಗೆ ಬಿಡುವೇ ಇಲ್ಲ. ಪಟಪಟ ಪಟಗಳ ತೆಗೆದೆವು ಎನ್ನುವುದಕ್ಕಿಂತ ಭರ್ಜರಿ ಚಚ್ಚಿ ಹಾಕಿದೆವು. ನಮಗೆ ತಾಯಿ ಸಿಗದೆ ಆ ಎರಡು ಮರಿಗಳು ಮಾತ್ರ ಥರಾವರಿ ಪೋಸು ಕೊಟ್ಟವು. ತಿರುಗಿ ಮಾರನೆಯ ದಿನ ಬಂದು ಮತ್ತೆ ಅಲ್ಲಿ ಹುಡುಕಿದರೆ ಅವುಗಳ ಸುಳಿವಿರಲಿಲ್ಲ. ರಾತ್ರಿಯೇ ತಾಯಿ ಜಾಗೆ ಬದಲಿಸಿದ್ದಳು.

ಎಡ್ವರ್ಡ್ ಜೇಮ್ಸ್ (ಜಿಮ್) ಕಾರ್ಬೆಟ್ ಹೆಸರಿನ ಈ ಉದ್ಯಾನವನವನ್ನು ಅಲ್ಲಿನ ಡ್ಯಾಮಿನ ಹಿನ್ನೀರು, ರಾಮಗಂಗಾ ನದಿಯ ಚೆಲುವು, ಹಸಿರು ಬೆಟ್ಟಗಳ ಹಿನ್ನೆಲೆ, ಮತ್ತು ಗ್ರಾಸ್ ಲ್ಯಾಂಡ್ ಎಂಬ ಮೋಹಕ ಹುಲ್ಲುಗಾವಲು ಸಗ್ಗದಂತೆ ಕಾಣುತ್ತದೆ. ಆ ಕಾಲಕ್ಕೆ ನರಭಕ್ಷಕ ದೊಡ್ಡ ಹುಲಿ ಮತ್ತು ಚಿರತೆಗಳನ್ನು ಜಿಮ್ ಕಾರ್ಬೆಟ್ ಬೇಟೆಯಾಡಿದ್ದ ನೆನಪುಗಳು ಮತ್ತೆ ತಾಜಾಗೊಂಡವು. ಬ್ರಿಟಿಷ್ ಇಂಡಿಯನ್ ಆರ್ಮಿಯಲ್ಲಿ ಕರ್ನಲ್ ಶ್ರೇಣಿಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಬೆಟ್ ನಿಸರ್ಗಪ್ರಿಯನೂ ಆಗಿದ್ದ. ಸರ್ಕಾರದ ಕರೆಯ ಮೇರೆಗೆ ಮನುಷ್ಯರ ಪ್ರಾಣಕ್ಕೆ ಸಂಚಕಾರವಾದ ನರಭಕ್ಷಕ ಪ್ರಾಣಿಗಳ ಆತ ಅನಿವಾರ್ಯವಾಗಿ ಶಿಕಾರಿ ಮಾಡಿದ ಹಾಗೆ ಕಾಣುತ್ತದೆ. ಕಾರ್ಬೆಟ್ ಓರ್ವ ಅತ್ಯಾಸಕ್ತಿಯ ಛಾಯಾಚಿತ್ರಗ್ರಾಹಕನೂ ಆಗಿದ್ದ. 'ಮ್ಯಾನ್ ಈಟರ್ಸ್ ಆಫ್ ಕುಮಾನ್' ಎಂಬ ಪುಸ್ತಕ ಇಲ್ಲಿನ ಘಟನೆಗಳನ್ನೇ ಆಧರಿಸಿ ಬರೆಯಲಾಗಿದೆ. ಈ ಉದ್ಯಾನವನಕ್ಕೆ 'ದಿ ಜಿಮ್ ಕಾರ್ಬೆಟ್ ನ್ಯಾಶನಲ್ ಪಾರ್ಕ್' ಎಂದು ಹೆಸರಿಡುವ ಮುಂಚೆ ಈ ಕಾಡಿನ ಭಾಗಕ್ಕೆ ಕುಮಾನ್ ಎಂದು ಕರೆಯಲಾಗುತ್ತಿತ್ತು. ಇಂಡಿಯಾದ ವನ್ಯಜೀವಿಗಳು ನಾಶವಾಗದೆ ಅದರ ಸಂರಕ್ಷಣೆ ಆಗಬೇಕೆಂದು ಕಾರ್ಬೆಟ್ ನಿಸ್ಸಂಕೋಚವಾಗಿ ಹೇಳಿದ್ದ ವ್ಯಕ್ತಿ. ಮೊದಲು ಕೊಂದವನೇ ಅದರ ಉಳಿಸುವಿಕೆಯ ಮಾತಾಡುವುದು ಅಚ್ಚರಿಯಾಗಿ ಕಾಣುತ್ತದೆ.

ಹಿನ್ನೀರಿನ ಬಯಲಲ್ಲಿ ಆನೆಗಳ ಹಿಂಡು ನೋಡಿದೆವು. ಇಲ್ಲಿನ ಆನೆಗಳು ದೈತ್ಯ ಮತ್ತು ಕೊಂಚ ಬಿಳಿಬೂದಿ ಮೆತ್ತಿದ ಹಾಗೆ ಇರುವಂತವು. ಕರ್ನಾಟಕ, ಕೇರಳ ಮತ್ತು ತಮಿಳುನಾಡಿನ ಆನೆಗಳಂತೆ ಕಪ್ಪು ಬಣ್ಣ ಹೊಂದಿರುವುದಿಲ್ಲ. ದಟ್ಟ ಹುಲ್ಲು ಅದರ ಹಿಂದೆ ನೀಲಿ ನೀರಿನ ಹಿನ್ನೆಲೆ ಇದ್ದ ಕಾರಣ ಅಲ್ಲಿ ಯಾವ ಪ್ರಾಣಿ ಕಂಡರೂ ಅತ್ಯುತ್ತಮ ಚಿತ್ರ ಸಿಗುತ್ತಿತ್ತು. ಮಳೆ ಬಂದು ಇಡೀ ವಾತಾವರಣವೇ ಮೋಡಮಯವಾದ ಕಾರಣ ಹೆಚ್ಚು ಪ್ರಾಣಿಗಳ ನೋಡಲಾಗಲಿಲ್ಲ. ಬಿಸಿಲು ಬಿದ್ದರೆ ಪ್ರಾಣಿಗಳ ಸಂಚಾರ ಹೆಚ್ಚಾಗಿರುತ್ತದೆ. ನಾವು ಹೋದ ಸಂದರ್ಭದಲ್ಲೇ ಪ್ರಾಕೃತಿಕ ಬದಲಾವಣೆ ಆಗಿ ಚಿಟಿಚಿಟಿ ಮಳೆಯನ್ನೇ ಹೆಚ್ಚು ಅನುಭವಿಸಬೇಕಾಯಿತು. ●